ಶ್ರೀ ಗೋವಿನಾಥ ಆರ್. ಸಾಂದ್ರ.—ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಟೈಮರ್ ಫಿಕ್ಸ್ ಮಾಡಿ.

ಉಪಾಧ್ಯಕ್ಷೆಣಿಯವರು.—ಈಗ ತಾನೇ ಇದರ ಬಗ್ಗೆ ಪಶ್ನವನ್ನು ಕಳುಹಿಸಿದ್ದಾರೆ. ಅದು ಸಂಬಂಧಪಟ್ಟ ಮಂತ್ರಿಗಳಿಗೆ ಹೋಗಬೇಕು, ಅವರು ಇರಬೇಕು ಆಮೇಲೆ ಯಾವ ತರಹ ಚರ್ಚೆ ಮಾಡಬೇಕೆಂದು ತೀರ್ಮಾನ ಮಾಡಬಹುದು.

ಶ್ರೀ ಎಲ್. ಆರ್. ಶಿವರಾಮೇಗೌಡ.—ಇಂಥಾ ವಿಚಾರಗಳನ್ನು ತನ್ನ ಗಮನಕ್ಕೆ ತಂದಾಗ ಸಾಕಷ್ಟು ಸಾರಿ ಚರ್ಚೆ ಮಾಡಲಿಕ್ಕೆ ಸಮಯವನ್ನು ಗೊತ್ತು ಮಾಡಿರುವಂಥ ನಿದರ್ಶನಗಳು ಈ ಸದನದಲ್ಲಿ ಬೇಕಾದಷ್ಟು ಇವೆ. ಇದು ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾಗಿರತಕ್ಕಂಥ ವಿಚಾರ. ಈ ರಾಜ್ಯದ ಬಡ ರೈತರ ಜಮೀನುಗಳನ್ನು ಕೊಳ್ಳೆ ಹೊಡೆದು ಬೇರೆಯವರಿಗೆ ಮಾರಾತಕ್ಕಂಥ ವಿಚಾರದಲ್ಲಿ ಲೋಪವಾಗಿರತಕ್ಕ ವಿಚಾರ, ಇವಕ್ಕೆ ತಾವು ಸಮಯವನ್ನು ಗೊತ್ತು ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷೆಣಿಯವರು.—ತಾವು ಇದರ ಬಗ್ಗೆ ಏನು ಪಶ್ನವನ್ನು ಕಳುಹಿಸಿದ್ದೀರಿ, ಇದರ ಬಗ್ಗೆ ವಿಚಾರ ಮಾಡಿ ಮತ್ತೆ ತಮಗೆ ತಿಳಿಸಲಾಗುವುದು. ಈಗ ಗಮನ ಸೆಳೆಯುವ ಸೂಚನೆ. ಶ್ರೀ ಕೆ. ಹೆಚ್. ಹನುಮೇಗೌಡರು.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಉಪಾಧ್ಯಕ್ಷೆಯವರೇ, ಈ ಗಮನ ಸೆಳೆಯುವ ಸೂಚನೆಗೆ ಉತ್ತರ ಕೊಡುವುದಕ್ಕೆ ಮಾನ್ಯ ಶಿಕ್ಷಣ ಮಂತ್ರಿಗಳು ಬರಬೇಕಾಗುತ್ತದೆ. ಈಗ ಮಾನ್ಯ ಶಿಕ್ಷಣ ಮಂತ್ರಿಯವರು ಮೇಲ್ಮನೆಯಲ್ಲಿ ಇದ್ದಾರೆ. ಆದ್ದರಿಂದ, ಈ ಗಮನ ಸೆಳೆಯುವ ಸೂಚನೆಯನ್ನು ಬೇರೆ ಸಮಯದಲ್ಲಿ ತೆಗೆದುಕೊಳ್ಳಬಹುದು.

ಉಪಾಧ್ಯಕ್ಷೆಣಿಯವರು.—ಶ್ರೀ ಶಿವಾನಂದ ಕೌಜಲಗಿಯವರು. ಇಲ್ಲ.

ಈಗ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಯುತ ಬಿ. ಎಂ. ಇದಿನಬ್ಬ ಅವರು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷೆಣಿಯವರೇ, ಈ ದಿವಸ ವಿರೋಧ ಪಕ್ಷದ ಸದಸ್ಯರುಗಳು ಸಭೆಗೆ ಬಂದಿಲ್ಲ. ಅವರು ಹೊರಗೇ ಇದ್ದಾರೆ. ಅವರನ್ನು ಬಿಟ್ಟು ನಾವು ಚರ್ಚೆ ಮಾಡುವುದು ಸರಿಯಲ್ಲ. ಅವರ ಮನ ಒಲಿಸಿ ಸದನಕ್ಕೆ ಬರುವ ಹಾಗೆ ಮಾಡಬೇಕು. ಅವರ ಸ್ಟೈಲ್ ಎಷ್ಟು ಇದೆಯೋ ಅವರ ಪ್ರಕಾರ ಅವರಿಗೆ ಚರ್ಚೆ ಮಾಡುವುದಕ್ಕೆ ಸಮಯವನ್ನು ನಿಗದಿ ಮಾಡಬಹುದು ಆದರೆ ಅವರು ಇಲ್ಲದೆ ನಾವು ಒನ್ ಸೈಡ್ ಚರ್ಚೆ ಮಾಡಿದರೆ ಅದು ಅಷ್ಟು ಸಮಂಜಸವಾಗುವುದಿಲ್ಲ.

ಉಪಾಧ್ಯಕ್ಷೆಣಿಯವರು.—ಮಾನ್ಯ ಸ್ಪೀಕರ್‌ರವರು, ಅವರುಗಳನ್ನು ಕರೆಸಿ ಸಮಾಲೋಚನೆ ನಡೆಸುತ್ತಾ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷೆಣಿಯವರೆ, ಸದನದಲ್ಲಿ ಈ ರೀತಿ ಅವರಿಲ್ಲದೆ ಚರ್ಚೆ ಮಾಡಿದರೆ ಏನಾಗುತ್ತದೆಂದರೆ, ಅವರಿಗೆ ೧೮೪ ಜನ ಸದಸ್ಯರ ಬೆಂಬಲ ಇದೆ, ಇವತ್ತಿನದಿವಸ ನಮ್ಮನ್ನು ದಮನ ಮಾಡುತ್ತಾರೆಂದು ಅವರು ಹೇಳುವುದಕ್ಕೆ ಅವಕಾಶವಾಗುತ್ತದೆ. ಅವರು ಆರೀತಿ ಹೇಳಬಾರದು, ಈ ಬಗ್ಗೆ ಅವರು ಸುಲಭವಾಗಿ ಸ್ಟೇಟ್‌ಮೆಂಟ್ ಕೊಡುತ್ತಾರೆ. ನಾವು ಇದರ ಬಗ್ಗೆ ಕನ್ಸಿಡರೇಟ್ ಆಗಿ ನೋಡಿಕೊಂಡು ಒಂದು ನಿರ್ಣಯ ತೆಗೆದುಕೊಂಡರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಅದು ಸರಿಯೆನಿಸುವುದಿಲ್ಲ ಎನ್ನುತಕ್ಕಂಥ ಮಾತನ್ನು ಹೇಳುತ್ತೇನೆ.

ಉಪಾಧ್ಯಕ್ಷೆಣಿಯವರು.—ಈಗಾಗಲೆ ಸ್ಪೀಕರ್‌ರವರು, ಅವರನ್ನು ಕರೆಸಿ ಮಾತನಾಡಲಿಕ್ಕೆ ತೀರ್ಮಾನ ಮಾಡಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಒಂದು ಹತ್ತು–ಹದಿನೈದು ನಿಮಿಷಗಳ ಕಾಲ ಸದನವನ್ನು ಮುಂದೂಡಿ ಅವರನ್ನು ಕರೆಸಿ ಸಂಧಾನ ಮಾಡುವುದು ಒಳ್ಳೆಯದು.

ಉಪಾಧ್ಯಕ್ಷೆಣಿಯವರು.—ಈಗಾಗಲೆ ಸ್ಪೀಕರ್‌ರವರು ಇದರ ಬಗ್ಗೆ ವಿಚಾರ ಮಾಡುತ್ತಾ ಇದ್ದಾರೆ. ಅವರನ್ನು ಕರೆಸಿ ಈ ವಿಷಯವನ್ನು ಇತ್ಯರ್ಥ ಮಾಡುತ್ತಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ವಿರೋಧ ಪಕ್ಷದವರನ್ನು ಒಳಪಡಿಸಿಕೊಂಡು, ವಿರೋಧ ಪಕ್ಷದವರ ಸಹಕಾರ ತೆಗೆದುಕೊಂಡು ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿರತಕ್ಕ ಪ್ರತೀತ ಇರುವುದರಿಂದ ವಿರೋಧ ಪಕ್ಷದವರು ಇಲ್ಲದೆ ಇರತಕ್ಕರಥ ಸಂದರ್ಭದಲ್ಲಿ ಬಿಸ್‌ನೆಸ್ ನಡೆಸುವುದು ಸೂಕ್ತವಲ್ಲವೆಂದು ನನಗನಿಸುತ್ತದೆ. ಅವರನ್ನು ಬಿಟ್ಟು ಮಾಡಿದರೆ ಅವರು ಹೊರಗಡೆ ಹೇಳುತ್ತಾರೆ ಅದಕ್ಕೆ ಅವಕಾಶ ಕೊಡದೆ ಇರುವ ರೀತಿ ೧೫ ನಿಮಿಷಗಳ ಕಾಲ ಸಭೆಯನ್ನು ಮುಂದೂಡಿದರೂ ಚಿಂತೆ ಇಲ್ಲ. ದಯಮಾಡಿ ಈಗಲೇ ಅವರನ್ನು ಕರೆಸಿ ಮಾತನಾಡುವುದು ಒಳ್ಳೆಯದು.

ಉಪಾಧ್ಯಕ್ಷಣಿಯವರು.—ಈಗಾಗಲೇ ಹೇಳಿದ್ದೇನೆ. ಅವರನ್ನು ಕರೆಸಿ ಮಾತನಾಡಲಿಕ್ಕೆ ಸ್ಪೀಕರ್ ರವರು ವ್ಯವಸ್ಥೆ ಮಾಡಿದ್ದಾರೆ,

ವಿಶ್ತೀಯ ಕಾರ್ಯಕಲಾಪಗಳು

1990–91ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ.

(ಸಣ್ಣ ನೀರಾವರಿ, ನೀರಾವರಿ ಜಲ ಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು, ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು) ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳು)

† ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ):— ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ನಾನು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು ತಂದಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರಗಳ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಕ್ಷೇತ್ರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಅನುಗುಣವಾದಂಥ ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪಿಸ ಬಯಸುತ್ತೇನೆ.

ಲೋಕೋಪಯೋಗಿ ಇಲಾಖೆ ಅಂದರೆ ಬಹಳ ಪ್ರಾಮುಖ್ಯತೆಯುಳ್ಳ ಇಲಾಖೆ. ಇದು ಬಹಳ ವಿಶಾಲವಾದ ಇಲಾಖೆಯಾಗಿದ್ದು ದೊಡ್ಡ ಪ್ರಮಾಣದಲ್ಲಿ ಇಲ್ಲಿ ಕೆಲಸಕಾರ್ಯಗಳು ಜರುಗುತ್ತಿರುತ್ತವೆ. ಆಯವ್ಯಯದಲ್ಲಿಯೂ ಕೂಡ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಈ ಖಾತೆಗೆ ಹಣವನ್ನು ವಿಂಗಡಿಸಿರುತ್ತಾರೆ. ಬೃಹತ್ ಪ್ರಮಾಣದಲ್ಲಿ ಕೆಲಸಕಾರ್ಯಗಳ ಉಸ್ತುವಾರಿಯು ಈ ಇಲಾಖೆಗೆ ಇರುವುದರಿಂದ ಸಾಮಾನ್ಯವಾ ಸಾರ್ವಜನಿಕರಲ್ಲಿ ಈ ಇಲಾಖೆಯ ಬಗ್ಗೆ ಅಷ್ಟು ಒಳ್ಳೆಯ ಅಭಿಪ್ರಾಯ ಇರದೆ, ಇಲ್ಲಿ ಏನೋ ಅವ್ಯವಹಾರಗಳು ನಡೆಯುತ್ತವೆ ಎಂಬ ಒಂದು ಭಾವನೆ ಹುಟ್ಟಿರುತ್ತದೆ. ದಿವಂಗತ ರಾಜಾಜಿಯವರು ಮದ್ರಾಸ್ ರಾಜ್ಯದಲ್ಲಿ ಅಂದು ಮುಖ್ಯ ಮಂತ್ರಿಯವರಾಗಿದ್ದಾಗ ಒಂದು ಮಾತನ್ನು ಹೇಳಿದ್ದುದನ್ನು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ತಂದು ಕೊಡುತ್ತೇನೆ. ಲೋಕೋಪಯೋಗಿ ಇಲಾಖೆಯು ನನ್ನ ಒಂದನೇ ನಂಬರ್ ಶತ್ರು ಎಂದು ಅವರು ಹೇಳಿದ್ದರು. ಅಂದರೆ ಅವರು ಇಲಾಖೆಯ ವಿಸ್ತಾರ ಮತ್ತು ಕಾರ್ಯಗಳನ್ನು ಗಮನಿಸಿ ಮತ್ತು ಅಲ್ಲಿ ನಡೆಯಬಹುದಾದ ಲೋಪದೋಷಗಳನ್ನು ಗಮನಿಸಿ ಈ ಮಾತನ್ನು ಹೇಳಿರಬಹುದು. ಅಷ್ಟು ದೊಡ್ಡದಾದ ಈ ಇಲಾಖೆಯಲ್ಲಿ ಅನೇಕ ಹೆಚ್ಚು ಕಡಿಮೆಗಳು ಆಗುತ್ತವೆ. ಇವೆಲ್ಲವನ್ನೂ ಗಮನಿಸಿದಲ್ಲಿಟ್ಟುಕೊಂಡು ಅವನ್ನು ಹೇಗೆ ಸಾಧ್ಯವಾಣಿ ಮಾಡಿಕೊಂಡು ಹೋಗಬೇಕೆಂಬುದು ಇದರ ಪ್ರಮುಖ ಅರ್ಥ. ಈ ಇಲಾಖೆಯಲ್ಲಿ ದಕ್ಷತೆಯು ಬಹಳಷ್ಟು ಹೆಚ್ಚಿಗೆ ಆಗಬೇಕು. ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಇಂಜಿನಿಯರ್ಸ್, ಆಗಲಿ, ಅಧಿಕಾರಿಗಳೇ ಆಗಲಿ, ಇತರ ಸಿಬ್ಬಂದಿ ವರ್ಗವೇ ಆಗಿರಲಿ ಇವರೆಲ್ಲರೂ ಮಾಡತಕ್ಕಂಥ ಕೆಲಸ ಕಾರ್ಯಗಳನ್ನು ದಕ್ಷತೆಯಿಂದ ಮನಸ್ಸುಕೊಟ್ಟು ಮಾಡಿದರೆ ಲೋಕೋಪಯೋಗಿ ಇಲಾಖೆಗೆ ಒಳ್ಳೆಯ ಹೆಸರು ಬರುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಅದರ ಮೂಲಕ ಸಾರ್ವಜನಿಕರಿಗೂ ಒಳ್ಳೆಯ ಕೆಲಸ ಕಾರ್ಯಗಳು ಆಗುತ್ತವೆ. ಅಂತೆಯೇ ಅವರು ಮಾಡುವ ಯಾವುದೇ ಕೆಲಸದಲ್ಲಿನ ಗುಣಮಟ್ಟವೂ ಕೂಡ ಉತ್ತಮ ರೀತಿಯದ್ದಾಗಿರಬೇಕು. ಇವೊತ್ತು ನಮ್ಮಲ್ಲಿ ನಡೆಯುವ ಕೆಲಸ ಕಾರ್ಯಗಳ ಗುಣಮಟ್ಟ ಯಾವ ರೀತಿಯಲ್ಲಿ ಇದೆ ಎಂಬುದು ಎಲ್ಲರಿಗೂ ಗೊತ್ತಿರುವಂಥ ವಿಚಾರವೇ ಆಗಿದೆ. ಆದುದರಿಂದ ಗುಣಮಟ್ಟವನ್ನು ಸುಧಾರಿಸಲು ನಾವು ಇವೊತ್ತು ತೀವ್ರತರದಲ್ಲಿ ಮನಸ್ಸು ಮಾಡದೇ ಹೋದರೆ ಈ ಇಲಾಖೆಗೆ ಬಂದಿರತಕ್ಕಂಥ ಅಪಕೀರ್ತಿಯನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಬಹಳಷ್ಟು ವರ್ಷಗಳ ಹಿಂದೆ ಆಗಿರತಕ್ಕಂಥ ಕಾಮಗಾರಿಗಳಿಗೂ, ಇಂದು ನಡೆಯುತ್ತಿರತಕ್ಕಂಥ ಕಾಮಗಾರಿಗಳಿಗೂ